एचएलएल लाइफ़केयर लिमिटेड
(भारत सरकार का उद्यम)
(पूर्व हिंदुस्तान लैटेक्स लिमिटेड)

HLL Lifecare Limited
(A Government of India Enterprise)
(formerly Hindustan Latex Limited)

# ಹೆಚ್ಎಲ್ಎಲ್ 2023-24 ನೇ ಸಾಲಿನ ಪ್ರತೀಕ್ಷಾ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ

ಹೆಚ್ಎಲ್ಎಲ್ ಲೈಫ್‌ಕೇರ್ ಲಿಮಿಟೆಡ್ ನ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯು, 2023-24ನೇ ಶೈಕ್ಷಣಿಕ ವರ್ಷದಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಬಯಸುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯು ಬಿ.ಪಿ.ಎಲ್.(BPL) ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಎಲ್ಎಲ್ ನ ಸಿ.ಎಸ್.ಆರ್. ಉಪಕ್ರಮವಾಗಿದೆ.

ಈ ಯೋಜನೆಯ ಉದ್ದೇಶ ವೈದ್ಯಕೀಯ (MBBS), ಇಂಜಿನಿಯರಿಂಗ್, ಫಾರ್ಮಸಿ, ಡಿಪ್ಲೋಮಾ, ನರ್ಸಿಂಗ್ ಮತ್ತು ITI ಕೋರ್ಸ್ ವಿಧ್ಯಾಭ್ಯಾಸ ಮಾಡುವವರಿಗೆ ಹಣಕಾಸಿನ ನೆರವು ನೀಡುವುದಾಗಿರುತ್ತದೆ, ಮುಖ್ಯವಾಗಿ ಕೇರಳದ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ಕೇರಳದ ತಿರುವನಂತಪುರಂ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮತ್ತು ಕರ್ನಾಟಕದ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ಕರ್ನಾಟಕದ ಬೆಳಗಾವಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಾಗುವುದು.

| ತಿರುವನಂತಪುರ / ಬೆಳಗಾವಿ ವಿದ್ಯಾರ್ಥಿಗಳು | | | | | | |
|---|---|---|---|---|---|---|
| ಕೋರ್ಸ್ | ಎಂಬಿಬಿಎಸ್ / ಮೆಡಿಸಿನ್ | ಫಾರ್ಮಸಿ | ಇಂಜಿನಿಯರಿಂಗ್ | ಡಿಪ್ಲೋಮಾ | ನರ್ಸಿಂಗ್ | ಐಟಿಐ |
| ವಿದ್ಯಾರ್ಥಿಗಳ ಸಂಖ್ಯೆ | 5 | 5 | 5 | 5 | 5 | 5 |
| ವಿದ್ಯಾರ್ಥಿ ವೇತನದ ಮೊತ್ತ | 40,000/-<br>25,000/- (BDS,BHMS, BAMS) | 25,000/- | 20,000/- | 15,000/- | 15,000/- | 5,000/- |

ಪ್ರತಿ ಕೋರ್ಸ್‌ನಿಂದ ಐದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಎಂಬಿಬಿಎಸ್ ಕೋರ್ಸ್‌ಗೆ ವಿದ್ಯಾರ್ಥಿವೇತನವನ್ನು ಬಯಸುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 40,000 ನೀಡಲಾಗುವುದು. ಅರ್ಹ MBBS ವಿದ್ಯಾರ್ಥಿಗಳ ಅನುಪಸ್ಥಿತಿಯಲ್ಲಿ, BDS, BHMS ಮತ್ತು BAMS ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನಕ್ಕೆ ಪರಿಗಣಿಸಲಾಗುವುದು ಮತ್ತು ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಮೊತ್ತವು ರೂ. 25,000 ಆಗಿರುತ್ತದೆ. ಫಾರ್ಮಸಿ ವಿದ್ಯಾರ್ಥಿಗಳು ರೂ. 25,000, ಇಂಜಿನಿಯರಿಂಗ್ ವಿದ್ಯಾರ್ಥಿಗಳು ರೂ. 20,000, ಡಿಪ್ಲೋಮಾ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ರೂ. 15,000, ಮತ್ತು ITI ಓದುತ್ತಿರುವ ವಿದ್ಯಾರ್ಥಿಗಳು ರೂ. 5,000 ವಾರ್ಷಿಕ ವಿದ್ಯಾರ್ಥಿವೇತನವನ್ನು ಕೋರ್ಸ್ ಅವಧಿಯಲ್ಲಿ ಪಡೆಯುತ್ತಾರೆ.

2014 ರಲ್ಲಿ ಪ್ರಾರಂಭವಾದ ಪ್ರತೀಕ್ಷಾ ಚಾರಿಟಿ ಅಡಿಯಲ್ಲಿ, ಬಿ.ಪಿ.ಎಲ್.(BPL) ವರ್ಗಕ್ಕೆ ಸೇರಿದ ಮತ್ತು ಕರ್ನಾಟಕದ ಬೆಳಗಾವಿಯ, ಕೇರಳದ ತಿರುವನಂತಪುರಂನ, ವಿವಿಧ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಪಡೆದ ಮತ್ತು ಪಡೆಯುತ್ತಿರುವ 293 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್‌ಎಲ್‌ಎಲ್ ರೂ.1,12,55,000/- ಮೌಲ್ಯದ ಆರ್ಥಿಕ ಸಹಾಯವನ್ನು ಒದಗಿಸಿದೆ. . ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯು, ಹೆಚ್‌ಎಲ್‌ಎಲ್ ಉದ್ಯೋಗಿಗಳಿಂದ ಪ್ರಾಯೋಜಿತ ಪಡೆದಿರುವ ಪ್ರತೀಕ್ಷಾದ ಅನುಷ್ಠಾನ ವೇದಿಕೆಯಾಗಿದೆ. ಸೊಸೈಟಿಯ ನಿಧಿಯನ್ನು ಉದ್ಯೋಗಿಗಳ ವೈಯಕ್ತಿಕ ಕೊಡುಗೆಗಳ ಮೂಲಕ ಮತ್ತು ಕಂಪನಿಯ ಸಿ.ಎಸ್.ಆರ್. ನಿಧಿಯಿಂದ ಸಂಗ್ರಹಿಸಲಾಗುತ್ತದೆ.

2023-24 ನೇ ಸಾಲಿನಲ್ಲಿ ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿವೇತನವನ್ನು ಪಡೆದ ವಿದ್ಯಾರ್ಥಿಗಳ ಜೊತೆಗೆ ಈ ವರ್ಷ ಗರಿಷ್ಠ 30 ಹೊಸ ವಿದ್ಯಾರ್ಥಿಗಳಿಗೆ ಅನುದಾನವನ್ನು ನೀಡಲಾಗುತ್ತದೆ.

ಶೈಕ್ಷಣಿಕ ಸಾಧನೆ ಮತ್ತು ಆರ್ಥಿಕ ಹಿನ್ನೆಲೆಯ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಸಕ್ತ ಅರ್ಜಿದಾರರು ಯೋಜನೆಯ ಪ್ರಯೋಜನ ಪಡೆಯಲು ಅರ್ಜಿಯ ಜೊತೆಗೆ 10 ನೇ ಮತ್ತು 12 ನೇ ತರಗತಿಗಳ ಅಂಕಪಟ್ಟಿಗಳು , ಸಂಸ್ಥೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಮತ್ತು ನಡತೆ ಪ್ರಮಾಣಪತ್ರ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಲಾದ ಮೂಲ ಆದಾಯದ ಪುರಾವೆ ಅಥವಾ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು. ವಿದ್ಯಾರ್ಥಿವೇತನಕ್ಕಾಗಿ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ವಾರ್ಷಿಕ ಶೈಕ್ಷಣಿಕ ಪ್ರಗತಿ ಪ್ರಮಾಣಪತ್ರ ಮತ್ತು ಅಂಕಪಟ್ಟಿಯನ್ನು ಪ್ರತಿವರ್ಷವು ಸಲ್ಲಿಸತಕ್ಕದ್ದು.

ಅರ್ಜಿ ನಮೂನೆಗಳು ಹೆಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಕಛೇರಿಗಳಲ್ಲಿ ಲಭ್ಯವಿವೆ ಅಥವಾ www.lifecarehll.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು . ಅರ್ಜಿಗಳು ಸೀನಿಯರ್ ಮ್ಯಾನೇಜರ್ (HR), ಹೆಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್, ಕಣಗಲಾ ಫ್ಯಾಕ್ಟರಿ, ಬೆಳಗಾವಿ ಜಿಲ್ಲೆ, ಕರ್ನಾಟಕ - 591225 ಇವರ ಕಛೇರಿಗೆ 24-08-2024 ಒಳಗಾಗಿ ತಲಿಪಿಸತಕ್ಕದ್ದು.